

ಕೂಸು ಕೂಸೇ. ಏನು ಕಂಡರೂ ಕೈಚಾಚುತ್ತದೆ. ಸಿಕ್ಕರೆ ಸೀದಾ ಬಾಯಿಗೆ. ಚೀನಾದ ಈ ಮಗು ತಾಯಿಯ ಜೊತೆ ವಸ್ತು ಪ್ರದರ್ಶನಕ್ಕೆ ಹೋದಾಗ ಕಂಡಿದ್ದು ಈ ಕಲಾಕೃತಿ. ಒಂದರೆಕ್ಷಣ ದಿಟ್ಟಿಸಿ ಸೀದಾ ಬೆತ್ತಲೆ ಕಲಾಕೃತಿಯ ಸ್ತನಕ್ಕೇ ಬಾಯಿ ಹಾಕಿತು. ಮಗು ಮನಸ್ಸು!

ರಾಜನೀತಿ ವಿಷಯದಲ್ಲಿ ಅಮೆರಿಕ-ಭಾರತದ ಮಧ್ಯೆ ಅಜ- ಗಜದ ಅಂತರ. ಆದರೆ ರಾಜಕಾರಣಿಗಳಲ್ಲಿ ಮಾತ್ರ ಕೂದಲೆಳೆ ಅಂತರವೂ ಇಲ್ಲ. ಇಲ್ಲಿಯೂ ರಾಷ್ಟ್ರಪತಿ ಭಾಷಣ ನಡೆಯುವಾಗ ಎಂಪಿಗಳಿಗೆ ತೂಕಡಿಕೆ. ಅಲ್ಲಿಯೂ ಅಧ್ಯಕ್ಷ ಒಬಾಮ ಭಾಷಣ ಮಾಡುವಾಗ ಈ ಭದ್ರತಾ ಕಾರ್ಯದರ್ಶಿ ಜಾನೆಟ್‌ಗೆ ನಿದ್ರಾದೇವಿಯ ಸೆಳೆತ. ಪ್ರಮುಖರ ಭಾಷಣ ನಡೆಯುವ ಮುನ್ನಾದಿನ ಕಾರ್ಯದರ್ಶಿಗಳು ನಿದ್ರೆಗೆಟ್ಟಿರುತ್ತಾರಲ್ವೇ?





ಸ್ಕಾಟ್ಲೆಂಡ್‌ನ ಎಡಿನ್‌ಬರ್ಗ್ ಮೃಗಾಲಯದಲ್ಲಿ 'ಚಿಂಪ್‌ಕ್ಯಾಮ್' ಯೋಜನೆಯಿಂದ ತಲೆಕೆಡಿಸಿಕೊಂಡವರು ವಿಜ್ಞಾನಿಗಳು. ಚಿಂಪಾಂಜಿಗೆ ಮಾತ್ರ ಕೈಗೆ ಸಿಕ್ಕ ವೀಡಿಯೊ ಕ್ಯಾಮೆರಾವೆಂದರೆ ಫುಟ್ಬಾಲ್, ಥ್ರೋಬಾಲ್. ಇನ್ನೂ ಈ ವಿಜ್ಞಾನಿಗಳು ಯಾಮಾರಿಸಿದರೆ ರಾಹುಲ್ ದ್ರಾವಿಡ್ ಬೌನ್ಸರ್ ಎದುರಿಸಿದ ರೀತಿಯಲ್ಲಿ ತಯಾರಿ ನಡೆಸಬೇಕಾಗುತ್ತದೆ.

ಅರ್ಜೆಂಟೀನಾ ಅಧ್ಯಕ್ಷೆ ಕ್ರಿಸ್ತಿನಾ ಫರ್ನಾಂಡಿಸ್ ವಯಾಗ್ರಾಗೆ ಪರ್ಯಾಯ ಔಷಧಿ ಕಂಡುಹಿಡಿದಿದ್ದಾರಂತೆ. ಬೆಲೆಯೂ ಅಂಥ ದುಬಾರಿ ಏನಲ್ಲ, ಸ್ವಾದಿಷ್ಟ ಖಾದ್ಯ ಮಾಡಿಯೂ ಸವಿಯಬಹುದು. ಅದು ಹಂದಿ ಮಾಂಸ. ಈಚೆಗೆ ಹಂದಿ ಮಾಂಸಕ್ಕೆ ಸಬ್ಸಿಡಿ ಪ್ರಕಟಿಸಿರುವ ಅಧ್ಯಕ್ಷೆ ಸ್ವತಃ ಹಂದಿ ಮಾಂಸ ತಿಂದ ನಂತರ ತನಗಾದ ಅನುಭವವನ್ನು ಬಿಚ್ಚಿಟ್ಟರು. ಹಂದಿ ಮಾಂಸ ಮಾರಾಟಗಾರರು ಪ್ರಚಾರ ರಾಯಭಾರಿಗಾಗಿ ಹುಡುಕಾಡಬೇಕಿಲ್ಲ. ಆದರೆ ವಯಾಗ್ರಾ ಕಂಪೆನಿಗೆ ತಲೆಬಿಸಿ ಶುರುವಾಗಿರಬಹುದು!



ಕಳೆದ ವಾರ ಇದೇ ಅಂಕಣದಲ್ಲಿ ಬೀಜಿಂಗ್‌ನ ಚಾಕೊಲೇಟ್ ಥೀಮ್ ಪಾರ್ಕ್ ಬಗ್ಗೆ ಬಂತು. ಇದೀಗ ಅಲ್ಲಿ ನಿರ್ಜೀವ ಬೊಂಬೆಗಳ ಬದಲು ಚಾಕೊಲೇಟ್ ಉಡುಪು ಧರಿಸಿದ ಜೀವಂತ ಬೊಂಬೆಗಳು ಕ್ಯಾಟ್‌ವಾಕ್ ನಡೆಸಿದ್ದಾರೆ. ಬೊಂಬೆಗಳ ಮೇಲೆ ಕದ್ದುಮುಚ್ಚಿ ಯಾದರೂ ಬೆರಳಾಡಿಸಿ ನಾಲಿಗೆಗೆ ತಾಕಿಸಬಹುದು. ಈ ಬೊಂಬೆ ನೋಡಿದರೆ...

ಆರ್ಥಿಕ ಹಿಂಜರಿತ ಕಂಡಿರುವ ಜಪಾನಿನಲ್ಲಿ ಪ್ರೀತಿ- ಪ್ರೇಮಕ್ಕೂ ಹಿಂಜರಿತ. ಅದಕ್ಕೇ ಜನವರಿ 31ರಂದು 'ಲವ್ ಯುವರ್ ವೈಫ್' ದಿನವಂತೆ. ಗಂಡನ ಬಳಿ ಹಣ ಇಲ್ಲದಿದ್ದರೂ ಜೊತೆಗಿರುವ ಹೆಂಡತಿಗೆ ಸಾರ್ವಜನಿಕವಾಗಿ 'ಐ ಲವ್ ಯೂ' ಎಂದು ಕೂಗಿ ಹೇಳುತ್ತಾರಂತೆ ಗಂಡಂದಿರು. ಹಣದ ಹಿಂದೆ ಹೋಗುವ ಹೆಂಡತಿಯರು ಕೇಳಿಸಿಕೊಂಡರಾ?

ಟೋಕಿಯೊ ಮತ್ಸ್ಯ ಸಂಗ್ರಹಾಗಾರದಲ್ಲಿ ನಿತ್ಯ ಒಂದೊಂದು ಜಲಚರಕ್ಕೂ ವ್ಯಾಲೆಂಟೈನ್ ದಿನದ ಸಂಭ್ರಮ. ಕೆಂಪು ಗುಲಾಬಿ ಮುಡಿಸಿ ಶುಭ ಹೇಳುವ ಸಿಬ್ಬಂದಿ. ಸುಮ್ಮನೆ ಬಾಯಲ್ಲಿ ಹೇಳುವ ಬದಲು ಸಂಗಾತಿಯನ್ನಾದರೂ ಒದಗಿಸ ಬಾರದೇ?

